# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಸದಸ್ಯರ ಹೆಸರು | : | ಶ್ರೀ ಶರವಣ ಟಿ.ಎ. (ವಿಧಾನ ಸಭೆಯಿಂದ ಚುನಾಯಿತರಾದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1136 |
| ಉತ್ತರಿಸಬೇಕಾದ ದಿನಾಂಕ | : | 28.12.2022 |
| ಉತ್ತರಿಸಬೇಕಾದ ಸಚಿವರು | : | ಮಾನ್ಯ ಪಶುಸಂಗೋಪನೆ ಸಚಿವರು. |

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿರುವ ಖಾಸಗಿ ಮತ್ತು ಸರ್ಕಾರಿ ಗೋಶಾಲೆಗಳೆಷ್ಟು; | ರಾಜ್ಯದಲ್ಲಿ 12 ಸರ್ಕಾರಿ ಗೋಶಾಲೆಗಳು ಹಾಗೂ 219 ಖಾಸಗಿ ಪಿಂಜರಾಪೋಲ್ ಗೋಶಾಲೆಗಳಿರುತ್ತವೆ. |
| ಆ) | ಪುಣ್ಯಕೋಟಿ ದತ್ತು ಯೋಜನೆಯಡಿ ಸರ್ಕಾರಿ ನೌಕರರು ಹಾಗೂ ಸಾರ್ವಜನಿಕರಿಂದ ಇಲ್ಲಿಯವರೆಗೆ ಎಷ್ಟು ಹಣ ಸಂಗ್ರಹವಾಗಿದೆ; ಮತ್ತು ಸರ್ಕಾರವು ವಾರ್ಷಿಕವಾಗಿ ಖಾಸಗಿ ಮತ್ತು ಸರ್ಕಾರಿ ಗೋಶಾಲೆಗಳಿಗೆ ಎಷ್ಟು ಹಣ ಖರ್ಚು ಮಾಡುತ್ತಿದೆ: | ಸರ್ಕಾರದ ಆದೇಶ ಸಂ:ಆಇ/42/ಎಸ್ಆರ್‌ಪಿ/2022 ದಿನಾಂಕ:19.11.2022 ರಂತೆ ಪುಣ್ಯಕೋಟಿ ಯೋಜನೆಯಡಿ ಸರ್ಕಾರಿ, ಅರೆ ಸರ್ಕಾರಿ, ನಿಗಮ ಮಂಡಳಿ ಅಧಿಕಾರಿಗಳು ಮತ್ತು ನೌಕರರು ಕ್ರಮವಾಗಿ 'ಎ' ವೃಂದದ ಅಧಿಕಾರಿಗಳು ರೂ.11,000-00 'ಬಿ' ವೃಂದದ ಅಧಿಕಾರಿಗಳು ರೂ.4,000.00 'ಸಿ' ವೃಂದದ ಸಿಬ್ಬಂದಿಗಳು ರೂ.400.00 ರಂತೆ ದೇಣಿಗೆಯನ್ನು ನವೆಂಬರ್ ಮಾಹೆಯ ವೇತನದಿಂದ ಕಟಾವಣೆ ಮಾಡಿ K2 ಖಾತೆ ಸಂಖ್ಯೆ:27572E094, K2 ಲೆಕ್ಕ ಶೀರ್ಷಿಕೆ:8449-00-120-0-18-716 ಜಮೆ ಮಾಡಲು ತಿಳಿಸಲಾಗಿದೆ.<br><br>ಸದರಿ ಲೆಕ್ಕ ಶೀರ್ಷಿಕೆಯಿಂದ ದಿನಾಂಕ:31.12.2022 ರ ನಂತರ ಪ್ರಾಣಿ ಕಲ್ಯಾಣ ಮಂಡಳಿಯ ಪುಣ್ಯಕೋಟಿ ಖಾತೆಗೆ ಜಮಾ ಮಾಡಲಾಗುವುದು. ದೇಣಿಗೆ ಹಣವನ್ನು ಸಂಪೂರ್ಣವಾಗಿ ವರ್ಗಾಯಿಸಿದ ನಂತರ ಒಟ್ಟು ಮೊತ್ತದ ವಿವರ ಲಭಿಸುವುದು.<br><br>ಸಾರ್ವಜನಿಕರಿಂದ ಪುಣ್ಯಕೋಟಿ ದತ್ತು ಯೋಜನೆಗೆ ರೂ.22.30 ಲಕ್ಷಗಳನ್ನು ದೇಣಿಗೆಯಾಗಿ ಸ್ವೀಕರಿಸಲಾಗಿದ್ದು, ಗೋಶಾಲೆಗಳಿಗೆ ನೀಡಲಾಗಿರುತ್ತದೆ. |
| ಇ) | ಮೇಲ್ಕಂಡ ಯೋಜನೆಯಡಿ ಸಂಗ್ರಹವಾದ ಹಣವನ್ನು ಪಾರದರ್ಶಕವಾಗಿ ಖರ್ಚು ಮಾಡಲು ಸರ್ಕಾರದ ಮಾರ್ಗಸೂಚಿ ವಿವರಗಳನ್ನು ನೀಡುವುದು? | ಪುಣ್ಯಕೋಟಿ ದತ್ತು ಯೋಜನೆಯಡಿಯಲ್ಲಿ ಸಂಗ್ರಹವಾಗುವ ಮೊತ್ತವನ್ನು ಪಾರದರ್ಶಕವಾಗಿ ಈಗಾಗಲೇ ಅಭಿವೃದ್ಧಿ ಪಡಿಸಿರುವ ಪುಣ್ಯಕೋಟಿ ದತ್ತು ಯೋಜನೆ Web portal ಮುಖಾಂತರ ನೇರವಾಗಿ ಗೋಶಾಲೆಗಳ ಬ್ಯಾಂಕ್ ಖಾತೆಗಳಿಗೆ ವರ್ಗಾಯಿಸಲಾಗುತ್ತಿದೆ. |

ಇ- ಪಸಂಮೀ 328 ಸಲೆವಿ 2022

(ಪ್ರಭು ಬಿ. ಚವ್ಹಾಣ್)
ಪಶುಸಂಗೋಪನೆ ಸಚಿವರು